ಲಕ್ಷಾಂತರ ಜನ ಸೇರುವ ಕಾಡಳ್ಳಿಯ ಬನಗಿರಿ ಅಮ್ಮನ ಜಾತ್ರೆ ಎಲ್ಲ ಕಾಲಕ್ಕೂ ಪ್ರಸಿದ್ಧಿ. ಅಲ್ಲಿ ಒಂದು ಕಾಲಕ್ಕೆ ತೇರು ಎಳೆಯುವುದು, ಕೊಂಡ ಹಾಯುವುದು, ಹರಕೆ ಹೊರುವುದು, ತಲೆ ಬೋಳಿಸಿಕೊಳ್ಳುವುದು, ಸಿಡಿ ಚುಚ್ಚುವುದು, ಬೆಂಡು ಬತ್ತಾಸು ಸುಣ್ಣಕಲ್ಲಿನ ಜತೆ ತಾಟಿನ ಮೇಲಿಟ್ಟು ಸಿಹಿತಿಂಡಿಗಳನ್ನು ಮಾರುವುದು, ಪೋರ ಪೋರಿಯರು ಮೈ ತಾಕಿಸಿ ಅಡ್ಡಾಡುವುದು, ಕರಡಿ ಕುಣಿಸುವುದು, ಹಾವು ಆಡಿಸುವುದು, ಜಾದೂ ಮಾಡುವುದು, ಮಲ್ಲಗಂಬ, ನಾಟಕದ ಕಂಪನಿ ಎಲ್ಲಾ ಇದ್ದುವು.



ನಾಗತಿಹಳ್ಳಿ ಚಂದ್ರಶೇಖರ

ಲಕ್ಷಾಂತರ ಜನ ಈಗಲೂ ಸೇರುತ್ತಾರೆ. ಆದರೆ ಜಾತ್ರೆ ಬದಲಾಗಿದೆ. ತೇರು ಎಳೆಯಲು ಮೋಟಾರ್ ಫಿಕ್ಸ್ ಆಗಿದೆ. ಬಿಳಿ ಗುಡಾರಗಳ, ಬಿಚ್ಚಿಕೊಂಡ ತರಾವರಿ ಅಂಗಡಿಗಳಲ್ಲಿ ಸಿಮ್‌ಕಾರ್ಡು, ಮೊಬೈಲು, ಟಿವಿ, ಏಸಿ, ಫ್ರಿಡ್ಜ್, ಮೈಕ್ರೊವೇವ್, ಬೈಕು, ಟ್ರ್ಯಾಕ್ಟರು, ರಾಸಾಯನಿಕ ಔಷಧಿ, ಬ್ಯೂಟಿ ಪಾರ್ಲರು, ಪಿಜ್ಜಾ–ಬರ್ಗರು–ಕಬಾಬು–ಮಂಚೂರಿ ಮತ್ತು ಐಸ್ಕ್ರೀಂ ಅಂಗಡಿಗಳು, ಬ್ರಾಂಡೆಡ್ ಬಟ್ಟೆಗಳು, ವಿಡಿಯೊ ಗೇಮ್‌ಗಳು ಮಾರಾಟಕ್ಕೆ ಸಿಗುತ್ತವೆ. ಕರೆಂಟಿನ ಮೇಲೆ ನಂಬಿಕೆ ಇಲ್ಲವಾದ್ದರಿಂದ ಪ್ರತಿ ಮಳಿಗೆಯ ಒಳಗೂ ಹೊಗೆ ಬಿಡುವ ಗುಡುಗುಡು ಜನರೇಟರ್ ಇವೆ.

ಈ ಸಾಲು ಮಳಿಗೆಯ ನಡುವೆ ಒಬ್ಬ ಟೆನ್ ಬೈ ಟೆನ್‌ನ ಸಣ್ಣ ಮಳಿಗೆ ತೆಗೆದು 'ಇಲ್ಲಿ ಆಮ್ಲಜನಕ ಉಚಿತವಾಗಿ ದೊರೆಯುತ್ತದೆ' ಎಂದು ಫಲಕ ಹಾಕಿ ಕಾಯುತ್ತಾ ನಿಂತಿದ್ದ. ಸುದ್ದಿ ಶಿಕಾರಿಯಲ್ಲಿದ್ದ ಬೇಟೆಗಾರರು ತಂತಮ್ಮ ಗದೆ, ಕತ್ತಿ ಹಿಡಿದು ಓಡೋಡಿ ಬಂದು ಖಾಲಿ ಅಂಗಡಿ ನೋಡಿ ನಿರಾಶರಾಗಿ, 'ಒಂದ್ ಪೈಪಿಲ್ಲ ; ಸಿಲಿಂಡರಿಲ್ಲ. ಎಲ್ಲಯ್ಯಾ ಆಮ್ಲಜನಕ? ನಮ್ಗೇ ಚೀಪ್ ಗಿಮಿಕ್ ಮಾಡ್ತೀಯ?' ಅಂತ ಕಿಚಾಯಿಸತೊಡಗಿದರು. ಅವನು ಬಗ್ಗಿ ನೆಲದ ಮೇಲಿರಿಸಿದ್ದ ಮಾವು, ಹಿಪ್ಪೆ, ನೇರಳೆ, ಹಲಸು, ಸಾಗುವಾನಿ ಮುಂತಾದ ಎಳೆ ಸಸಿಗಳನ್ನು ತೆಗೆದುಕೊಡುತ್ತಾ 'ಇವನ್ನು ನೆಟ್ಟು ಬೆಳೆಸಿ. ದೊಡ್ಡದಾದ ಮೇಲೆ ಒಂದೊಂದೂ ಐದು ನೂರು ಜನರಿಗೆ ಬೇಕಾದ ಆಮ್ಲಜನಕ ಕೊಡುತ್ತವೆ' ಎಂದ.

'ಇದನ್ನು ಹ್ಯಾಗಪ್ಪಾ ಬ್ರೇಕಿಂಗ್ ನ್ಯೂಸ್ ಮಾಡೋದು' ಅಂತ ಅವರೆಲ್ಲ ಪೇಚಾಡಿಕೊಂಡು ಹೋದರು.

ಬರವಣಿಗೆ, ಸಿನಿಮಾ ನಿರ್ದೇಶನ, ಗೀತರಚನೆ, ಸಂಘಟನೆ – ಹೀಗೆ ನಾಲ್ಕಾರು ಕ್ರಿಯಾಶೀಲ ರಂಗಗಳಲ್ಲಿ ತೊಡಗಿಸಿಕೊಂಡಿರುವ ನಾಗತಿಹಳ್ಳಿ ಚಂದ್ರಶೇಖರ ಅವರ ಮೂಲಸೆಲೆ ಕತೆ ಹೇಳುವುದೇ ಆಗಿದೆ. ಈತನಕ 13 ಸಿನಿಮಾ, ಕಿರುತೆರೆಯ 10 ಧಾರಾವಾಹಿಗಳನ್ನು ನಿರ್ದೇಶಿಸಿದ್ದಾರೆ. ಒಂಬತ್ತು ಕಥಾಸಂಗ್ರಹಗಳು, ಮೂರು ಕಾದಂಬರಿಗಳು, ಆರು ಪ್ರವಾಸ ಕಥನಗಳು, 11 ಅಂಕಣಬರಹಗಳ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ನಾಗತಿಹಳ್ಳಿಯವರು.